ಎನ್. ಜಗನ್ನಾಥ ಪ್ರಕಾಶ್

# ಸದಭಿರುಚಿಯ ರಂಗನಾಯಕ



# ಎಚ್.ಎನ್. ಹೂಗಾರ

ಸ್ವಾತಂತ್ರ್ಯಾನಂತರದ ಕನ್ನಡ ವೃತ್ತಿ ರಂಗಭೂಮಿಗೆ ಹೊಸ ದಿಕ್ಕು ತೋರಿದ ನಾಟಕಕಾರ, ನಟ, ನಿರ್ದೇಶಕ ಎಚ್.ಎನ್. ಹೂಗಾರ. ಕರಡಿ ಮಜಲು ಜನಪದ ಕಲೆಯ ಹಿನ್ನೆಲೆಯುಳ್ಳ ಕುಟುಂಬ ಅವರದು. ಅವರ ಪೂರ್ಣ ಹೆಸರು ಹುಚ್ಚಪ್ಪ ನಾಗಪ್ಪ ಹೂಗಾರ. ತಂದೆ  ನಾಗಪ್ಪ ಅವರೇ ಹೂಗಾರರ ಕಲಾಬದುಕಿಗೆ ಪ್ರೇರಣೆ.

ತಂದೆಯ ಅಕಾಲಿಕ ನಿಧನದಿಂದ ಪ್ರಾಥಮಿಕ ಶಿಕ್ಷಣಕ್ಕೆ ಓದು ನಿಲ್ಲಿಸಬೇಕಾಯಿತು. ಆದರೆ ಮುಂದೆ ಶಾಲಾ ಗುರುಗಳಾಗಿದ್ದ ಚೌಡಗೌಡರ ಪ್ರೋತ್ಸಾಹದಿಂದ ಮೆಟ್ರಿಕ್‌ವರಗೆ ತಲುಪಲು ಸಾಧ್ಯವಾಯಿತು. ಮನೆ ಮನೆಗೆ ಹೂಮಾರುತ್ತ ಓದಿದರು.

ಬೀದಿ ಬೀದಿಗಳಲ್ಲೂ ದೊಡ್ಡಾಟ ನಡೆಯುತ್ತಿದ್ದ ಕಾಲವದು. ಹೀಗೊಮ್ಮೆ ಬೀದಿಯಲ್ಲಿ ನಡೆದ ದೊಡ್ಡಾಟದಲ್ಲಿ ಹುಚ್ಚಪ್ಪ ಅವರಿಗೆ ನಾಟ್ಯ ಸರಸ್ವತಿ ಶಾರದೆಯ ಪಾತ್ರ ಮಾಡುವ ಅವಕಾಶ ಬಂತು. ಅದರಲ್ಲಿ ಒಂದೋ ಎರಡೂ ಸಂಭಾಷಣೆ ಇದ್ದಿರಬೇಕು. ಆದರೆ ಅದು ಹೂಗಾರರ ಬದುಕಿಗೆ ಹೊಸ ತಿರುವು ನೀಡಿತು. ರಂಗಭೂಮಿಯತ್ತ ದೃಷ್ಟಿ ಇಟ್ಟ ಅವರಿಗೆ ಸಂಗೀತ ಕಲಿಯುವ ಅವಕಾಶವೂ ಸಿಕ್ಕಿತು.

ಪುಟ್ಟ ಹುಡುಗ ಹೂಗಾರನಿಗೆ ಎಳೆಯ ವಯಸ್ಸಿನಲ್ಲಿಯೇ ಏನೆಲ್ಲ ಜವಾಬ್ದಾರಿಗಳು ಬಿದ್ದವು. ಓದು, ನಟನೆ, ಗಾಯನ, ಮನೆ ಮನೆಗೆ ಹೂವು, ಬಿಲ್ವಪತ್ರೆ ಹಾಕುವ ಕೆಲಸ. ಇದೆಲ್ಲದರ ಜೊತೆಗೆ ಅವರು ಸಹಪಾಠಿಗಳಿಗಾಗಿ ಪುಟ್ಟ ಪುಟ್ಟ ನಾಟಕಗಳನ್ನು ಬರೆದು, ನಿರ್ದೇಶಿಸುವ ಕೆಲಸವನ್ನು ಆರಂಭಿಸಿದರು. ಇದೇ ಅವರ ನಾಟಕ ರಚನೆಗೆ ಬುನಾದಿಯಾಯಿತು.

ನಿತ್ಯ ಬಿಲ್ವಪತ್ರೆ ತಂದು ಕೊಡುತ್ತಿದ್ದ ಹೂಗಾರರನ್ನು ಶಾಂತಗಿರಿ ವಕೀಲರ ಪತ್ನಿ ನೀಲಮ್ಮ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಒಮ್ಮೆ ಮೈಲಾರ ಗುಡ್ಡಕ್ಕೆ ಕರೆದೊಯ್ದ ಶಾಂತಗಿರಿ ವಕೀಲರು ನಾಟಕ ಬರೆಯಲು ಪ್ರೇರೇಪಿಸಿದರು. ಆಗ ಹೂಗಾರರಿಗೆ ಹೊಳೆದಿದ್ದು ವಕೀಲರ ಪತ್ನಿ ನೀಲಮ್ಮನವರ ಸಾತ್ವಿಕ ಬದುಕು. ಅದೇ ಕತೆ ಸಾಮಾಜಿಕ ನಾಟಕ 'ಭಕ್ತಿ ಜ್ಯೋತಿ'ಯಾಗಿ